## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ..ದಂ.ರವರ ನ್ಯಾಯಾಲಯ, ಟಿ. ನರಸೀಪುರ.

## ಸಿಸಿ ನಂ.6/2019

ಪಿರ್ಯಾದಿದಾರರು : ಸರ್ಕಾರ ಪರವಾಗಿ ಬನ್ನೂರು ಪೊಲೀಸ್ ಠಾಣೆ

ವಿರುದ್ದ

ಆರೋಪಿಗಳು : ಸಾವಿತ್ರಮ್ಮ ಮತ್ತು ಇತರರು

## ಆಪಾದನೆ

ಶ್ರೀ ಪ್ರಶಾಂತ ಜಿ.ಸಿ. ಬಿ.ಎ.ಎಲ್., ಎಲ್.ಎಲ್.ಎಂ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯಾದ ನಾನು, ಆರೋಪಿಯಾದ -

1. ಸಾವಿತ್ರಮ್ಮ ಕೋಂ ಲೇಟ್ ತಿಮ್ಮೇಗೌಡ,
   ವಯಸ್ಸುಃ 50 ವರ್ಷ, ಉದ್ಯೋಗಃ ಗೃಹಿಣಿ,

2. ಚೌಡೇಗೌಡ ಬಿನ್ ಲೇಟ್ ವೆಂಕಟೇಗೌಡ,
   ವಯಸ್ಸುಃ 60 ವರ್ಷ, ಉದ್ಯೋಗಃ ವ್ಯವಸಾಯ,

3. ಕುಮಾರ ಬಿನ್ ಚೌಡೇಗೌಡ,
   ವಯಸ್ಸು ಃ 30 ವರ್ಷ, ಉದ್ಯೋಗಃ ವ್ಯವಸಾಯ,

4. ಶ್ರೀನಿವಾಸ ಬಿನ್ ಚೌಡೇಗೌಡ,
   ವಯಸ್ಸು ಃ 27 ವರ್ಷ, ಉದ್ಯೋಗಃ ವ್ಯವಸಾಯ,

5. ಮಹದೇವ ಬಿನ್ ಚೌಡೇಗೌಡ,
   ವಯಸ್ಸು ಃ 25 ವರ್ಷ, ಉದ್ಯೋಗಃ ವ್ಯವಸಾಯ,

   ಆರೋಪಿತರ ವಾಸ. ತುರಗನೂರು ಗ್ರಾಮ,
   ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಏನೆಂದರೆ

ದಿಃ 06.04.2018 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಬನ್ನೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ತುರಗನೂರು ಗ್ರಾಮದ ವಾಸಿ ಚಾಸಾ-1 ರವರ ಮನೆಯ ಮುಂದೆ ಖಾಲಿ ಜಾಗದಲ್ಲಿ 1 ರಿಂದ 5 ಆರೋಪಿಗಳಾದ ನೀವು ಸಮಾನ ಉದ್ದೇಶ ಹೊಂದಿ ಆ ಪೈಕಿ 1 ಮತ್ತು 2 ನೇ ಆರೋಪಿಗಳು 3 ರಿಂದ 5 ನೇ

ಆರೋಪಿಗಳಿಗೆ ಕುಮ್ಮಕ್ಕು ನೀಡಿ, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 114 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಸಮಾನ ಉದ್ದೇಶ ಹೊಂದಿ ಆ ಪೈಕಿ 3 ರಿಂದ 5 ನೇ ಆರೋಪಿಗಳಾದ ನೀವು ಚಾಸಾ-1 ರವರ ಖಾಲಿ ಜಾಗದಲ್ಲಿ ಅಕ್ರಮ ಪ್ರವೇಶ ಮಾಡಿ, ಆ ಮೂಲಕ ಭಾರತಿಯ ದಂಡ ಸಂಹಿತೆಯ ಕಲಂ 447 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಸಮಾನ ಉದ್ದೇಶ ಹೊಂದಿ, ಚಾಸಾ-1 ರವರ ಜಾಗದಲ್ಲಿ ಸರ್ವೆ ಸೌದೆಯನ್ನು ತಂದು ಹಾಕಿ, ಬಣವೆ ಮಾಡಿ ಮರದ ತುಂಡುಗಳನ್ನು ನೆಟ್ಟು ಮೇಕೆಗಳನ್ನು ಕಟ್ಟಿ ಹಾಕಿದ ಬಗ್ಗೆ ಕೇಳಲು ಬಂದ ಚಾಸಾ-1 ರವರನ್ನು ಸಾರ್ವಜನಿಕ ಶಾಂತಿ ಭಂಗ ಉಂಟು ಮಾಡಲೆಂಬ ಉದ್ದೇಶದಿಂದ ಚಾಸಾ-1 ರವರನ್ನು ಉದ್ದೇಶಿಸಿ ನೀನ್ಯಾರು ನಮ್ಮ ಕೇಳಲು ಇದು ನಮ್ಮ ಜಾಗ ನೀನು ನಮ್ಮ ವಿರುದ್ಧವೆ ಕೋರ್ಟಿಗೆ ಹೋಗಿ ಕೇಸ್ ಹಾಕ್ತಿಯಾ ಕೇಸ್ ಹಾಕಿ ಅದೇನ್ ಕಿತ್ಕೋತೀಯೋ ಕಿತ್ಕೋ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನಪಡಿಸಿ, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 504 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಮೇಲಿನ ಆರೋಪದ ವಿಚಾರಣೆಯು ನಿಮ್ಮ ವಿರುದ್ಧ ಈ ನ್ಯಾಯಾಲಯದಲ್ಲಿ ನಡೆಯತಕ್ಕದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ22.03.2021

**(ಪ್ರಶಾಂತ ಜಿ ಸಿ.)**
ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.
ಟಿ. ನರಸೀಪುರ.